

## ಟ್ರೆಂಡ್‌ನಲ್ಲಿ ಸೀಕ್ವೆಲ್ ಸಿನಿಮಾ

**‘ಕೆಜಿಎಫ್’** ಸಿನಿಮಾ ನಂತರ ಕನ್ನಡದಲ್ಲಿ ಮತ್ತೆ ಸೀಕ್ವೆಲ್ ಸಿನಿಮಾಗಳ ಹಾದಿ ತೆರೆದುಕೊಂಡಂತಿದೆ. ಕೆಜಿಎಫ್ ಸಿನಿಮಾ ಯಶಸ್ಸು ದಾಖಲಿಸುತ್ತಿದ್ದಂತೆ ಅದರ ಇನ್ನೊಂದು ಭಾಗ, ‘ಕೆಜಿಎಫ್ 2’ ಸಿನಿಮಾ ಬಿಡುಗಡೆಗೊಂಡಿತು. ಈ ಯಶಸ್ಸಿನ ಬೆನ್ನಲ್ಲೇ ಮತ್ತಷ್ಟು ಕನ್ನಡ ಸಿನಿಮಾಗಳು ಕಾಣಿಸಿಕೊಳ್ಳುತ್ತಿವೆ. ಸದ್ಯ ಆ ಪಟ್ಟಿಯಲ್ಲಿ ನಟ ಸತೀಶ್ ನೀನಾಸಂ ಅಭಿಯನದ ‘ಅಶೋಕ ಬ್ಲೇಡ್’ ಕೂಡ ಸೇರಿಕೊಳ್ಳುವ ತಯಾರಿ ನಡೆದಿದೆ.

‘ಮ್ಯಾಟ್ನಿ’ ಸಿನಿಮಾ ಚಿತ್ರೀಕರಣ ಮುಗಿಸಿರುವ ನಟ ಸತೀಶ್ ನೀನಾಸಂ, ಮತ್ತೊಂದು ಸಿನಿಮಾಗೆ ಇತ್ತೀಚೆಗೆ ಸಹಿ ಹಾಕಿದ್ದಾರೆ. ಜೊತೆಗೆ ‘ಅಶೋಕ ಬ್ಲೇಡ್’ ಕೂಡ ಅವರ ಸಿನಿಮಾ ಪಟ್ಟಿಯಲ್ಲಿದೆ.

ಈ ಸಿನಿಮಾ ಚಿತ್ರೀಕರಣ ಕೊನೆಯ ಹಂತದಲ್ಲಿದ್ದು, ಕಾವ್ಯಾ ಶೆಟ್ಟಿ ಈ ಸಿನಿಮಾಗೆ ನಾಯಕಿ. ಚಾಮರಾಜನಗರ ಹಾಗೂ ಹಳೇ ಮೈಸೂರು ಪ್ರದೇಶದಲ್ಲಿ ಸಿನಿಮಾ ಚಿತ್ರೀಕರಿಸಲಾಗಿದ್ದು, ಈ ಸಿನಿಮಾ ಕಥೆಯನ್ನು ಎರಡು ಭಾಗಗಳಲ್ಲಿ ಬಿಡುಗಡೆ ಮಾಡುವ ಆಲೋಚನೆಯಿದೆಯಂತೆ. ದಯಾನಂದ ಟಿ.ಕೆ. ಈ ಸಿನಿಮಾದ ಕಥೆ ಬರೆದಿದ್ದಾರೆ. ವಿನೋದ್ ವಿ. ಧೋಂಡಾಲೆ ನಿರ್ದೇಶನ ಮಾಡಿದ್ದಾರೆ. ಚಿತ್ರದ ಮೊದಲ ಭಾಗದಲ್ಲಿ 70ರ ದಶಕದ ಕಥೆಯನ್ನು ತರಲಾಗಿದೆ ಎಂದು ಚಿತ್ರತಂಡ ಹೇಳಿಕೊಂಡಿದೆ. ಸತೀಶ್ ನೀನಾಸಂ ಅವರ ಕರಿಯರ್‌ನಲ್ಲಿಯೇ ಇದು ಮೊದಲ ಪ್ಯಾನ್ ಇಂಡಿಯಾ ಸಿನಿಮಾ ಆಗಿದ್ದು, ಹಿಂದಿ ಸೇರಿದಂತೆ ದಕ್ಷಿಣ ಭಾರತದ ನಾಲ್ಕು ಭಾಷೆಗಳಲ್ಲಿ ಸಿನಿಮಾ ಹೊರತರುವ ಸಿದ್ಧತೆ ನಡೆದಿದೆ.

‘ಕೆಜಿಎಫ್’ ಸಿನಿಮಾ ನಂತರ ಚಂದನವನದಲ್ಲಿ ಮತ್ತೆ ಸೀಕ್ವೆಲ್ ಸಿನಿಮಾಗಳು ಕಾಣಿಸಿಕೊಳ್ಳಲು ಆರಂಭಿಸಿವೆ. ‘ಕೆಜಿಎಫ್’ ನಂತರ ‘ತೋತಾಪುರಿ 2’ ಹಾಗೂ ‘ಅವತಾರ ಪುರುಷ 2’ ತೆರೆಗೆ ಸಿದ್ಧವಾಗುತ್ತಿವೆ.

## ಹೊಗಳಿಕೆಯ ಸುರಿಮಳೆ

‘ರಾಜ್ ಯಾವುದೇ ಪಾತ್ರ ಕೊಟ್ಟರೂ ಕಣ್ಣುಮುಚ್ಚಿಕೊಂಡು ಒಪ್ಪಿಗೆ ನೀಡುತ್ತೇನೆ’ ಎಂದು ಹೇಳಿದ್ದಾರೆ ಗಾಯಕಿ, ನಟಿ ಚೈತ್ರಾ ಜೆ. ಆಚಾರ್. ರಾಜ್ ಬಿ. ಶೆಟ್ಟಿ ನಿರ್ದೇಶನದ ‘ಟೋಬಿ’ ಚಿತ್ರದಲ್ಲಿ ಸದ್ಯ ಚೈತ್ರಾ ನಟಿಸಿದ್ದಾರೆ.

‘ರಾಜ್, ಒಂದು ಪಾತ್ರವನ್ನು ನಾನು ಮಾಡಬೇಕೆಂದು ಬಯಸಿದರೆ ಏನೂ ಯೋಚಿಸದೇ ಒಪ್ಪಿಗೆ ಕೊಡುತ್ತೇನೆ. ಆ ಪಾತ್ರದ ಬಗ್ಗೆ ಬೇರೇನನ್ನೂ ಕೇಳುವುದಿಲ್ಲ, ಯೆಸ್ ಅನ್ನುತ್ತೇನೆ ಅಷ್ಟೆ. ಅಷ್ಟು ನಂಬಿಕೆಯನ್ನು ಅವರ ಮೇಲೆ ಇಟ್ಟಿದ್ದೇನೆ. ಪ್ರತಿ ಕಲಾವಿದರು ಕೂಡ ರಾಜ್ ಅವರೊಂದಿಗೆ ಒಮ್ಮೆಯಾದರೂ ಕೆಲಸ ಮಾಡಬೇಕು’ ಎಂದು ಹೊಗಳಿಕೆಯ ಮಳೆಯನ್ನೇ ಸುರಿಸಿದ್ದಾರೆ.

ತಮ್ಮ ಸಿನಿಮಾ ಆಯ್ಕೆಯ ಮಾನದಂಡಗಳ ಬಗ್ಗೆಯೂ ಚೈತ್ರಾ ಮಾತನಾಡಿದ್ದಾರೆ. ‘ಚಿತ್ರಕ್ಕೆ ಬರಹ ಗಟ್ಟಿಯಾಗಿದ್ದರೆ, ಅಲ್ಲಿ ಕಲಾವಿದರಿಗೆ ನಟಿಸಲು ಅವಕಾಶವಿರುತ್ತದೆ. ಒಬ್ಬ ನಟಿಯಾಗಿ, ನನ್ನ ಹಾದಿಗೆ ಯಾವುದು ಬರುತ್ತದೋ ಅದನ್ನು ಎಕ್ಸ್‌ಪ್ಲೋರ್ ಮಾಡಲು ಸದಾ ಬಯಸುತ್ತೇನೆ. ಅದನ್ನು ಪ್ರೀತಿಯಿಂದ ಮಾಡುತ್ತೇನೆ. ಇಡೀ ಚಿತ್ರದಲ್ಲಿ ನಾನಿರಬೇಕೆಂದು ಬಯಸುವುದಿಲ್ಲ. ಐದು ನಿಮಿಷ ಬಂದು ಹೋಗುವುದಾದರೂ ಸರಿ, ಸಿನಿಮಾಗೆ ಅದು ಮುಖ್ಯವಾಗಿರಬೇಕು. ಇಲ್ಲದಿದ್ದರೆ ಅದು ದೊಡ್ಡ ಬ್ಯಾನರ್‌ನ ಸಿನಿಮಾವಾದರೂ ನಯವಾಗಿ ತಳ್ಳಿಹಾಕುತ್ತೇನೆ’ ಎನ್ನುತ್ತಾರೆ.

ತಮ್ಮನ್ನು ಜನರು ಬಾಲಿವುಡ್ ನಟಿ ಆಲಿಯಾ ಭಟ್‌ಗೆ ಹೋಲಿಸುವ ಕುರಿತು ಪ್ರತಿಕ್ರಿಯಿಸಿರುವ ಚೈತ್ರಾ, ‘ಆಲಿಯಾ ಭಟ್ ಅವರಂತೆಯೇ ನೀವಿದ್ದೀರ ಎಂದು ಜನ ನನಗೆ ಹೇಳಿದಾಗ ಖುಷಿಯಾಗುತ್ತದೆ. ಅವರು ತುಂಬಾ ಸುಂದರ ಮಹಿಳೆ. ನನ್ನನ್ನು ಆಲಿಯಾ ಎಂದು ಯಾರಾದರೂ ಕರೆದರೆ, ನನ್ನನ್ನು ಸುಂದರಿ ಎಂದೇ ಕರೆಯುತ್ತಿದ್ದಾರೆ ಅನಿಸುತ್ತದೆ. ಯಾವತ್ತಾದರೂ ಒಂದು ದಿನ ಯಾರಾದರೂ ಆಲಿಯಾಗೂ, ಚೈತ್ರಾ ನಿಮ್ಮಂತೆಯೇ ಇದ್ದಾರೆಂದು ಹೇಳಬೇಕು ಎಂಬುದೇ ನನ್ನಿಷ್ಟ’ ಎಂದಿದ್ದಾರೆ.

